**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.798/2017**

**ಸಿ.ಡಬ್ಲ್ಯೂ-11**

**ಪಿ.ಡಬ್ಲ್ಯೂ-04**

| | |
|---|---|
| ಸಾಕ್ಷಿಯ ಹೆಸರು | : ಮಲ್ಲಿಕಾರ್ಜುನ ಬಬಲಾದಿ |
| ತಂದೆ/ಗಂಡನ ಹೆಸರು | : ಲಕ್ಷ್ಮಣ |
| ವಯಸ್ಸು | : 39 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಶಿರಾಡೋಣ |

**ದಿನಾಂಕ:14-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1 ರವರ ಪರಿಚಯ ಇರುತ್ತದೆ. ಚಾಸಾ 10 ನನ್ನ ತಂದೆ. ಚಾಸಾ 7 ರಿಂದ 10 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇರುತ್ತದೆ.

2016 ರಲ್ಲಿ ಚಾಸಾ 1 ರವರ ತಂದೆ ಮರಣ ಹೊಂದಿದ್ದು ಅವರ ತಿಥಿ ಕಾರ್ಯ ಇದ್ದಾಗ ಚಾಸಾ 6 ರವರು ಆರೋಪಿಗೆ ಪೋನ ಮಾಡಿ ಚಾಸಾ 1 ರವರಿಗೆ ತಂದೆ ಕಾರ್ಯಕ್ಕೆ ಬರಲು ತಿಳಿಸಿರುತ್ತಾರೆ. ಆ ಕಾರಣಕ್ಕಾಗಿ ಆರೋಪಿಯು ಚಾಸಾ 1 ರವರಿಗೆ ಹೋಗುವುದು ಬೇಡ ಎಂದು ಹೊಡೆದಿರುತ್ತಾರೆ. ಆರೋಪಿಯು ಚಾಸಾ 1 ರವರಿಗೆ ಕುಕ್ಕರಿನಿಂದ ಹೊಡೆದು ಗಾಯ ಮಾಡಿದ್ದರು. ಆರೋಪಿಯು ಚಾಸಾ 1 ರವರಿಗೆ ಹಣ ತೆಗೆದುಕೊಂಡು ಬಾ ಆಸ್ತಿಯಲ್ಲಿ ಪಾಲು ತೆಗೆದುಕೊಂಡು ಬಾ ಮತ್ತು ಬಂಗಾರ ತೆಗೆದುಕೊಂಡು ಬಾ ಎಂದು ಹೊಡೆಯುತ್ತಿದ್ದರು. ಆ ಘಟನೆಯು ದಿಃ12.08.2016 ರಂದು ಮದ್ಯಾಹ್ನ 2 ಗಂಟೆಗೆ ಆಗಿರುತ್ತದೆ. ನಾವು ಆರೋಪಿಗೆ ಬುದ್ದಿವಾದ ಹೇಳಿದರು ಸಹ ನಮ್ಮ ಮಾತನ್ನು ಕೇಳಿರುವುದಿಲ್ಲ. ಆರೋಪಿಯ ಮನೆಯವರೆಲ್ಲರೂ ಸಹ ಹಣ ಮತ್ತು ಬಂಗಾರವನ್ನು ತೆಗೆದುಕೊಂಡು ಬಾ ಎಂದು ಹಿಂಸೆ ನೀಡುತ್ತಿದ್ದರು. ಚಾಸಾ 1 ರವರಿಗೆ ತೆರಚಿದ ಗಾಯಗಳಾಗಿದ್ದವು. ನಂತರ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ನಾನು ಈ ಕುರಿತು ಪೊಲೀಸ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ಚಾಸಾ 1 ರವರಿಗೆ ಆರೋಪಿಯು ಖಲಾಸ ಮಾಡಿದರೇ ನಿಮ್ಮ ಮನೆಯವರು ಬರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಆಗ ಚಾಸಾ 1 ರವರು ಕೈಯಿಂದ ಕೂದಲು ಹಿಡಿದು ಹೊಡೆಯುತ್ತಿದ್ದಾಗ ಚಾಸಾ 7 ಮತ್ತು 8 ರವರು ಬಿಡಸಲು ಬಂದಾಗ ಅವರಿಗೂ ಸಹ ತಳ್ಳಿ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾ 1 ರವರಿಗೆ ಅಲ್ಲೇ ಇದ್ದ ಕುಕ್ಕರಿನಿಂದ ತಲೆಗೆ ಹಾಗೂ ರಾಡ್ನಿಂದ ಬೆನ್ನಿಗೆ ಹೊಡೆದು ಗಾಯಪಡಿಸಿರುತ್ತಾನೆ ಎಂದರೆ ಸರಿ. ಈ ರೀತಿ ಘಟನೆ ಆಗಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಈ ರೀತಿಯಾಗಿ ಚಾಸಾ 1 ರವರು ದೂರನ್ನು ನೀಡಿದ್ದರು ಮತ್ತು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಬಿ.ಬಿ.ಬಿ.(ಜೆ). ವಕೀಲರಿಂದಃ**

ಚಾಸಾ 1 ರವರು ನನಗೆ ಸೋದರ ಮಾವನ ಮಗಳು. ಚಾಸಾ 1 ರವರು ನಮ್ಮ ಮನೆಯಲ್ಲಿ ಇರುವುದಿಲ್ಲ. ಚಾಸಾ 1 ರವರು ಆಕೆಯ ತವರು ಮನೆಯಲ್ಲಿ ಇರುತ್ತಾಳೆ. ಚಾಸಾ 1 ಮತ್ತು ಆಕೆಯ ತಂದೆ, ತಾಯಿ ಮತ್ತು ಸಹೋದರ ಎಲ್ಲರೂ ಖಾಸ ಸಂಬಂಧಿಗಳು ಎಂದರೆ ಸರಿ. ಸದರಿ ಚಾಸಾ 1 ರವರ ತಂದೆಯ ಕಾರ್ಯ ಇದ್ದರಿಂದ ಆರೋಪಿಗೆ ಪೋನ ಮಾಡಿ ಚಾಸಾ 1 ರವರಿಗೆ ಬರುವಂತೆ ತಿಳಿಸಿರುತ್ತೇವೆ ಎನ್ನುವುದನ್ನು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ಆ ಕಾರ್ಯಕ್ಕೆ ಹೋಗುವುದು ಬೇಡ ಎಂದು ಆರೋಪಿಯು ಚಾಸಾ 1 ರವರಿಗೆ ಹೊಡೆದಿರುತ್ತಾನೆ ಎಂದು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ಆರೋಪಿ ಮತ್ತು ಆತನ ಮನೆಯವರು ಹಣ ಮತ್ತು ಬಂಗಾರ ತೆಗೆದುಕೊಂಡು ಬಾ ಎಂದು ಚಾಸಾ 1 ರವರಿಗೆ ಹೇಳಿರುತ್ತಾರೆ ಎಂದು ನಿನ್ನ ಹೇಳಿಕೆಯಲ್ಲಿ ಬರೆಸಿರುತ್ತಿಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿ ಮಾತ್ರ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ 1 ರವರು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ಆರೋಪಿಯು ವ್ಯವಸಾಯ ಮಾಡಿಕೊಂಡು ಇರುತ್ತಾನೆ ಎಂದರೆ ಸರಿ. ಆರೋಪಿಯು ಸಾಕಷ್ಟು ಸ್ಥಿತಿವಂತ ಇರುತ್ತಾನೆ ಎಂದರೆ ಸರಿ. ಆರೋಪಿಗೆ ತಮ್ಮ ಕುಟುಂಬದ ನಿರ್ವಹಣೆಗೆ ಯಾವುದೇ ದರದ್ದು ಇಲ್ಲ ಎಂದರೆ ಸರಿ. ಆರೋಪಿಯು ಚಾಸಾ 1 ರವರಿಗೆ ಹಣ, ಬಂಗಾರವನ್ನು ತೆಗೆದುಕೊಂಡು ಬಾರ ಎಂದು



ಹೊಡೆಯುತ್ತಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸೌಮ್ಯಾ, ವಿನಾಯಕ ಮತ್ತು ಸೌಜನ್ಯ ಹುಟ್ಟಿದ ಬಳಿಕ ಚಾಸಾ 1 ರವರ ಕಡೆಯಿಂದ ನಾವು ದೂರನ್ನು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ 1 ರವರಿಗೆ ದೂರ ಮಾಡಲು ನಾವೆಲ್ಲರೂ ಸೇರಿ ಚಾಸಾ

1 ರವರ ಕಡೆಯಿಂದ ದೂರ ನೀಡಿಸಿರುತ್ತೇವೆ ಎಂದರೆ ಸರಿಯಲ್ಲ. ದಿಃ12.08.2016 ರಂದು ಆರೋಪಿಯು ಚಾಸಾ 1 ರವರಿಗೆ ಕುಕ್ಕರ ಮತ್ತು ರಾಡಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆತನಿಗೆ ಕೂದಲು ಹಿಡಿದು ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯರೊಂದಿಗೆ ಮಿಲಾಪೆಯಾಗಿ ಚಾಸಾ 1 ರವರಿಗೆ ಯಾವುದೇ ಗಾಯ ಆಗದೇ ಇದ್ದರು ಸಹ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಮಾವನ ಮಗಳು ಇದ್ದಿದ್ದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**